ಹೊಟ್ಟೆ ಚುರುಗುಟ್ಟುತ್ತಿತ್ತು. ಒಂದು ತೊಟ್ಟು ನೀರಾದರೂ ಕೊಡಿ ಎಂದು ಕಿರುಚಿದೆ. ಊಹ್ಞೂಂ ಯಾರೊಬ್ಬರೂ ಕೊಡಲಿಲ್ಲ. ಒಂದು ದಿನವಿಡೀ ಅದೇ ಸ್ಥಿತಿಯಲ್ಲಿದ್ದೆ.

ಮೈಯಲ್ಲಿ ಶಕ್ತಿಯಲ್ಲದೇ ಎದ್ದು ನಿಲ್ಲಲೂ ಆಗದಷ್ಟು ನಿತ್ರಾಣ. ನನ್ನ ಸ್ಥಿತಿ ನೋಡಿ ತಿನ್ನಲಿಕ್ಕೆ ಕೊಟ್ಟು, "ಇನ್ಮುಂದೆ ನೆಟ್ಟಗೆ ಬದುಕಬೇಕು. ತಪ್ಪಿದೆಯೋ ಮತ್ತೆ ಇದೇ ಶಿಕ್ಷೆ ಆಗುತ್ತೆ" ಅಂತ ಎಚ್ಚರಿಸಿದರು. ಮತ್ತೆ ನಾನು ಊರುಬಿಟ್ಟು ಮುಂಬೈ ಸೇರಿದೆ. ಅಲ್ಲಿ ಹಳೆಯ ಗೆಳೆಯರನ್ನು ಭೇಟಿಮಾಡಿದೆ. ಬ್ಯಾಂಕ್‌ನವರಿಂದ ಸಾಲ ಪಡೆದೆ. ಹೊಸ ಹೋಟೆಲ್ ಆರಂಭಿಸಿದೆ. ಉದ್ಯಮ ಕೈ ಹಿಡಿಯಿತು. ಅಮ್ಮನನ್ನು ನನ್ನೊಂದಿಗೆ ಕರೆದುಕೊಂಡು ಬಂದೆ. ಮನೆ ಖರೀದಿಸಿದೆ. ಓಡಾಡಲು ಕಾರು ಕೊಂಡೆ. ಐಷಾರಾಮಿ ಜೀವನಕ್ಕೆ ಕಾಲಿಟ್ಟೆ. ಅಮ್ಮ ಮದುವೆಯಾಗಲು ಒತ್ತಾಯ ಮಾಡತೊಡಗಿದಳು. ಆಗ ನನ್ನ ವಯಸ್ಸು ಇಪ್ಪತ್ತಾರು! ಇಪ್ಪತ್ತಾರನೆ ವಯಸ್ಸಿಗೇ ಹೆಸರು, ಹಣ ಎರಡೂ ಗಳಿಸಿದೆ. ಉದ್ಯಮದಲ್ಲಿ ನನ್ನನ್ನು ಗುರುತಿಸತೊಡಗಿದರು. ನನಗೆ ವಿಧವೆಯೊಬ್ಬಳೊಂದಿಗೆ ಸಂಬಂಧವಿತ್ತು. ಆಕೆ ಒಂದು ಮಗುವಿನ ತಾಯಿ. ನಾನು ಕೆಲಸ ಮಾಡುತ್ತಿದ್ದ ಹಳೆಯ ಹೋಟೆಲ್ ಮ್ಯಾನೇಜರ್ ಪತ್ನಿ. ಆತ ಅಪಘಾತವೊಂದರಲ್ಲಿ ತೀರಿಕೊಂಡಿದ್ದ. ಅವಳನ್ನು ನನ್ನೊಂದಿಗೆ ಕರೆದುಕೊಂಡು ಬಂದೆ. ಬಹಳ ದಿನಗಳ ಕಾಲ ಒಟ್ಟಿಗೆ ಜೀವನ ನಡೆಸಿದೆವು, ದಿನಕಳೆದಂತೆ ಅವಳು ನನ್ನನ್ನು ಮದುವೆಯಾಗುವಂತೆ ಒತ್ತಾಯ ಮಾಡತೊಡಗಿದಳು. ಅವಳ ಬೇಡಿಕೆಯನ್ನು ನಿರಾಕರಿಸಿದೆ. ಆ ಹೆಂಗಸು ಮಗುವನ್ನು ಸಾಯಿಸಿ ತಾನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಆ ಸಾವಿಗೆ ನನ್ನನ್ನೇ ಹೊಣೆಗಾರನನ್ನಾಗಿ ಮಾಡಲಾಯಿತಲ್ಲದೇ ಮೂರು ವರ್ಷ ಜೈಲು ಶಿಕ್ಷೆಕೂಡ ಆಯಿತು. ಪುನಃ ನಾನು ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡೆ. ಮೊದಲಿಗಿಂತ ಹೆಚ್ಚು ಯಶಸ್ವಿಯಾದೆ; ಆಸ್ತಿ ಸಂಪತ್ತು ಗಳಿಸಿದೆ. ಮದುವೆಯಾಗುವಂತೆ ಒತ್ತಾಯ ಮಾಡುತ್ತಿದ್ದ ಅಮ್ಮ ತೀರಿಕೊಂಡಳು.

